ಅಸಲು ದಾವಾ ನಂ.**81/2019**
ಪಿ.ಡಬ್ಲೂ.**1**

ಸಾಕ್ಷಿಗೆ ದಿನಾಂಕಃ **01.12.2021** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ನಂ.**1** ಮತ್ತು **2** ರವರ ಪರ ಶ್ರೀ.**MKK** ವಕೀಲರಿಂದ.

1. ನಿಪಿ.1 ದಾಖಲೆ ಕೊಡುವ ಕಾಲಕ್ಕೆ ನನ್ನ ತಂದೆ ಸಿಂದಗಿಗೆ ಬಂದಿದ್ದರು ಎಂದರೆ ನಿಜ. ಯರಗಲ್‌ನಿಂದ ಸಿಂದಗಿಗೆ 10 ಕಿ.ಮೀ ಅಂತರ ಇದೆ. ಅವರಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ.

2. ಹಸನಸಾಬ ನನ್ನ ಅಜ್ಜ ಎಂದರೆ ನಿಜ. ಅವರು ಒಟ್ಟು ನಾಲ್ಕು ಮಂದಿ ಸಹೋದರರು ಎಂದರೆ ನಿಜ. ಅವರ ಹೆಸರು ಲಾಲೇಸಾಬ, ಹಸನಸಾಬ, ರೆಹಮಾನಸಾಬ ಹಾಗೂ ಸೈಫನಸಾಬ ಅಂದರೆ ನಿಜ. ರೆಹಮಾನಸಾಬ ಮಕ್ಕಳು ಇಲ್ಲದೆ ಮೃತ ಪಟ್ಟಿರುತ್ತಾರೆ ಎಂದರೆ ನಿಜ. ಸೈಫನಸಾಬಗೆ ಮಕ್ತುಂಸಾಬ ಮತ್ತು ಸಿಕಂದರ ಎಂಬ ಇಬ್ಬರು ಮಕ್ಕಳು ಎಂದರೆ ನಿಜ. ಅವರಿಬ್ಬರು ಮೃತ ಪಟ್ಟಿರುತ್ತಾರೆ ಎಂದರೆ ನಿಜ. ಆತನ ಮಕ್ಕಳನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ನಿಜ.

3. ಲಾಲೇಸಾಬಗೆ ದರೆಸಾ, ಸುಲೇಮನ್, ಅಲ್ಲಿಸಾಬ ಮತ್ತು ರಜಕ ಎಂಬ ಮಕ್ಕಳು ಇರುತ್ತಾರೆ ಎಂದರೆ ನಿಜ. ಸುಲೇಮನ್, ಅಲ್ಲಿಸಾಬ ಮತ್ತು ರಜಕ ರವರ ಮಕ್ಕಳನು ದಾವೆಗೆ ಪಕ್ಷಗಾರರಾಗಿ ಸೇರಿಸಿರುವುದಿಲ್ಲ ಎಂದರೆ ನಿಜ. ಹಸನಸಾಬ ಪೋಲಿಸ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನಿಜ. ಆತನು ಇಲಾಖೆಯಿಂದ ನಿವೃತ್ತರಾಗಿರುತ್ತಾರೆ ಎಂದರೆ ನಿಜ. ಆತನು 1980 ರಲ್ಲಿ ಮೃತ ಪಟ್ಟಿರುತ್ತಾರೆ ಎಂದರೆ ನಿಜ. ಆತನು ವಾಲೀಕಾರ ಎಂದು ಕೆಲಸ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ.

4. ದಾವಾ ಆಸ್ತಿ ಈಗಲೂ ಇನಾಮ ಆಸ್ತಿ ಆಗಿರುತ್ತವೆ ಅಂದರೆ ನನಗೆ ಗೊತ್ತಿರುವುದಿಲ್ಲ.

5. ಲಾಲೇಸಾಬ, ಹಸನಸಾಬ, ರೆಹಮಾನಸಾಬ ಹಾಗೂ ಸೈಫನಸಾಬ ರವರ ತಂದೆ ದರೇಸಾ ಎಂದರೆ ನಿಜ. ಆತನು ವಾಲೀಕಾರಿಕೆ ಮಾಡುತ್ತಿದಾ ಎಂದರೆ ನಿಜ. ಆತನ ನಂತರ ವಾಲೀಕಾರಿಕೆಯನ್ನು ಲಾಲೇಸಾಬ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಪುನಃ ಹೇಳುತ್ತಾರೆ ಲಾಲೇಸಾಬ ಮಾಡುತ್ತಿದ್ದರು. ಹಸನಸಾಬ ಮತ್ತು ಆತನ ವಾರಿಸುದಾರರು ಯಾವುದೇ ಕಾಲಕ್ಕೆ ವಾಲೀಕಾರಿಕೆ ಮಾಡುತ್ತಿರಲಿಲ್ಲ ಮತ್ತು ಅವರ ಹೆಸರು ದಾಖಲೆಯಲ್ಲಿ ನಮೂದು ಆಗಿರುವುದಿಲ್ಲ ಎಂದರೆ ಗೊತ್ತಿರುವುದಿಲ್ಲ.

6. ನಿಪಿ.4 ರಿಂದ 6 ರಲ್ಲಿ ಎಂದಿಗೂ ಅವರ ಹೆಸರುಗಳು ದಾಖಲು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳಂತೆ ದರೇಸಾಬ ಮರಣ ನಂತರ ಲಾಲೇಸಾಬನ ಹೆಸರು ನಮೂದಿಸಲಾಗಿರುತ್ತದೆ ಎಂದರೆ ನಿಜ.

7. ವಾಲೀಕಾರಿಕೆಯನ್ನು 1961 ರಲ್ಲಿ ಸರಕಾರ ರದ್ದು ಮಾಡಿತ್ತು ಎಂದರೆ ನಿಜ. ವಾಲೀಕಾರಿಕೆ ರದ್ದಾದ ನಂತರ ಆಸ್ತಿಗಳು ಸರಕಾರಕ್ಕೆ ವಿಹಿತಗೊಂಡು ನಂತರ ವಾಲೀಕಾರಿಕೆ ಮಾಡುತ್ತಿದ್ದವರಿಗೆ ಮಂಜೂರಾಗಿತ್ತು ಎಂದರೆ ನಿಜ. ನನ್ನ ತಂದೆಯಾಗಲೀ ನಾನಾಗಲೀ ಮಂಜೂರು ಮಾಡುಲು ಯಾವುದೇ ಅರ್ಜಿ ಕೊಟ್ಟಿರುವುದಿಲ್ಲ.

8. ಸ.ನಂ.280, 281, 399 ಮತ್ತು 400 ಆಸ್ತಿಗಳನ್ನು 1 ನೇ ಪ್ರತಿವಾದಿಯ ತಂದೆ ದರೇಸಾಬ 1972 ರಲ್ಲಿ ಅರ್ಜಿ ಕೊಟ್ಟು ತನ್ನ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ನಿಜ. ಡ.ನಂ. 5057 ಮತ್ತು 7335 ಆತನ ಹೆಸರಿನಲ್ಲಿ ದಾಹಲಾಗಿತ್ತು ಎಂದರೆ ನಿಜ. 1 ನೇ ಪ್ರತಿವಾದಿಯ ತಂದೆ ಸರಕಾರಕ್ಕೆ ಕಬುಲಾತ್ತಿ ಬರೆದುಕೊಟ್ಟಿರುತ್ತಾರೆ ಎಂದರೆ ನಿಜ. ಆತನ ವೈಯಕ್ತಿಕ ಹೆಸರಿನಲ್ಲಿ ಸದರಿ ಆಸ್ತಿಗಳು ಮಂಜೂರು ಆಗಿತ್ತು ಎಂದರೆ ನಿಜ.

9. 1972 ರಿಂದ ಇಂದಿನ ವರಿಗೂ ವಾದಿಯರಾಗಲೀ ಅವರ ತಂದೆಯಾಗಲೀ ಅಬ್ದುಲ ರೆಹಮಾನ ಅಥವಾ ಅವರ ತಂದೆ ಹಸನಸಾಬ ತಮ್ಮ ಹಜೆಸರಿಗೆ ಮಾಡುವಂತೆ ಯಾವುದೇ ಅರ್ಜಿ ಕೊಟ್ಟಿರುವುದಿಲ್ಲ ಎಂದರೆ ನಿಜ. ಅವರು ಇಂದಿನ ವರಿಗೂ

ಯಾವುದೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ.

10. ಲಾಲೇಸಾಬ ಮೃತಪಟ್ಟ ನಂತರ ಆತನ ಮಗ ದರೇಸಾ ವಾಲೀಕಾರಿಕೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆತನು ವಾಲೀಕಾರಿಕೆ ಮಾಡುತ್ತಿದ್ದ ಕಾರಣ ಆತನ ಹೆಸರಿಗೆ ಆಸ್ತಿಗಳು ಮಂಜೂರಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಹಸನಸಾಬ ಯಾವುದೇ ಕಾಲಕ್ಕೂ ವಾಲೀಕಾರಿಕೆ ಮಾಡದ ಕಾರಣ ಆತನು ಅರ್ಜಿ ಕೊಟ್ಟಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ.

11. 1972 ರಿಂದ ಮಂಜೂರಾದ ದಿನಾಂಕದಿಂದ ದಾಖಲೆಗಳು ದರೇಸಾಬ ಮತ್ತು ಆತನ ಮಕ್ಕಳ ಹೆಸರಿನಲ್ಲಿ ಇರುತ್ತದೆ ಎಂದರೆ ನಿಜ. ಅವರು ಸಾಗುವಳಿ ಮಾಡುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ದಾಖಲೆಗಳು ನನ್ನ ತಂದೆ, ನನ್ನ ತಂದೆಯ ತಂದೆ ಅಥವಾ ಅವರ ತಂದೆಯ ಹೆಸರಿನಲ್ಲಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

12. ಡ.ನಂ.6331 ರಂತೆ 1 ನೇ ಪ್ರತಿವಾದಿ, 2 ನೇ ಪ್ರತಿವಾದಿ ಮತ್ತು ಅವರ ತಂದೆ ದಿಃ16.10.1975 ರಂದು ವಿಭಾಗ ಮಾಡಿಕೊಂಡಿರುತ್ತಾರೆ ಅಂದರೆ ಇರಬಹುದು. ಸ.ನಂ.281 ನ್ನು, 1991 ರಂದು ದರೇಸಾ ಹಾಗೂ ಇತರರು MR.No.7502 ರಂತೆ ಭಾಗ ಮಾಡಿಕೊಂಡಿರುತ್ತಾರೆ ಎಂದರೆ ನಿಜ. ನನ್ನ ತಂದೆಯಾಗಲೀ ಉಳಿದ ಪ್ರತಿವಾದಿಯರಾಗಲೀ ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ಮತ್ತು 2 ರವರು ಕಬ್ಜೆವಹಿವಾಟು ಮಾಡುತ್ತಾರೆ ಎಂದರೆ ಸರಿಯಲ್ಲ.

13. 1975 ರಿಂದ ಇಲ್ಲಿಯವರಗೆ ನಾವು ಯಾವುದೇ ಕ್ರಮ ಕೈಗೊಳ್ಳದ ಕಾರಣ ನಮಗೆ ದಾವೆಯಲ್ಲಿ ಪರಿಹಾರ ಪಡೆಯಲು ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 1972 ರಿಂದ 1984 ರವರಗೆ ಯಾವುದೇ ಕ್ರಮ ಕೈಗೊಳ್ಳದ ಕಾರಣ ಪ್ರತಿವಾದಿ ನಂ.1 ಮತ್ತು 2 ರವರು ವಿರುದ್ಧ ಕಬ್ಜಾನಾತೆಯಿಂದ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ.

14. ದರೇಸಾಬ ಮೃತ ಪಟ್ಟು 20 ವರ್ಷಗಳು ಆಗಿವೆ ಎಂದರೆ ನಿಜ. ಆತನ ಕಾಲದಲ್ಲಿಯು ಮತ್ತು ಪ್ರತಿವಾದಿ ನಂ.1 ಮತ್ತು 2 ರವರ ವಿರುದ್ಧ ಅವರ ವಹಿವಾಟಿಗೆ ನಾವು ತೊಂದರೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಅವರ ವಹಿವಾಟಿಗೆ ತಕರಾರು ಮಾಡಿದ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ನಿಜ.

15. ಮೇಲೆ ಹೇಳಿದ ನಾಲ್ಕು ಜಮೀನು ದರೇಸಾ ಅವರ ಮಕ್ಕಳ ನಡುವೆ ವಿಭಾಗ ಮಾಡಿಕೊಂಡು ಸ.ನಂ.281 ಆತ ಇಟ್ಟುಕೊಂಡಿದ್ದ ಎಂದರೆ ಇರಬಹುದು. ಸದರಿ ಜಮೀನುಗಳಿಗೆ ನನಾಗಾಲೀ, ನನ್ನ ತಂದೆಯಾಗಲೀ ಅಥವಾ ನನ್ನ ಅಜ್ಜನಿಗಾಗಲಿ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಹಸನಸಾಬ ಪೋಲಿಸ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಆತನಿಗೂ ಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಉಳಿದ ಪ್ರತಿವಾದಿಯರು ಏಕಪಕ್ಷಿಯವಾಗಿದ್ದು, ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

**(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕೊಟ್ಟು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸರಿ ಇದೆ,

ಸಹಿ/-
**(ಪ್ರಸಾದ್ ಕೆ.ಬಿ.)**
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ್.ಎಫ್.ಸಿ. ಸಿಂದಗಿ.